



## ಶ್ರದ್ಧಾಗೀಗ ವಸಂತಕಾಲ!

'ಯು ಟರ್ನ್' ಚಿತ್ರದ ಬೆದರುಕಂಗಳ ಚೆಲುವೆ ಶ್ರದ್ಧಾ ಶ್ರೀನಾಥ್ ಅವರ ವೃತ್ತಿಜೀವನದಲ್ಲೀಗ ವಸಂತಕಾಲ. ಒಂದೆಡೆ ನಟನೆಗೆ ಮನ್ನಣೆ, ಇನ್ನೊಂದೆಡೆ ಕೈತುಂಬಾ ಅವಕಾಶಗಳು.

ಪವನ್ ಕುಮಾರ್ ನಿರ್ದೇಶನದ 'ಯು ಟರ್ನ್' ಚಿತ್ರದಲ್ಲಿನ ನಟನೆಗಾಗಿ ಶ್ರದ್ಧಾ ಅವರಿಗೆ ಇತ್ತೀಚೆಗಷ್ಟೇ 'ಫಿಲ್ಮ್‌ಫೇರ್' ಪ್ರಶಸ್ತಿ ದೊರೆತಿದೆ. ಚಿತ್ರರಸಿಕರು ಮೆಚ್ಚಿನೀಡುವ ಈ ಪ್ರಶಸ್ತಿ ಕಲಾವಿದರ ಆತ್ಮವಿಶ್ವಾಸ ಹೆಚ್ಚಿಸುವಂತಹದ್ದು. ಇನ್ನು ಅವಕಾಶಗಳ ಮಾತು: ಪ್ರೀತಂ ಗುಬ್ಬಿ ನಿರ್ದೇಶನದ 'ಜಾನಿ ಜಾನಿ ಎಸ್ ಪಪ್ಪಾ' ಚಿತ್ರದ ನಾಯಕಿ ಪಾತ್ರ ಅವರನ್ನು ಹುಡುಕಿಕೊಂಡು ಬಂದಿದೆ. ವಿಜಯ್ ನಾಯಕರಾಗಿ ನಟಿಸಲಿರುವ ಈ ಚಿತ್ರದ ಹೀರೋಯಿನ್ ಪಾತ್ರಕ್ಕೆ ಹಲವರ ಹೆಸರು ಕೇಳಿ ಬಂದಿತ್ತಾದರೂ, ಅಂತಿಮವಾಗಿ ಅವಕಾಶ ಒಲಿದಿರುವುದು ಶ್ರದ್ಧಾಗೆ. ಇದರ ಜೊತೆಗೆ ಧ್ರುವ ಸರ್ಜಾ ಅಭಿನಯದ 'ಹಯಗ್ರೀವ' ಚಿತ್ರದ ನಾಯಕಿಯಾಗಿಯೂ ಅವರ ಹೆಸರು ಚಾಲ್ತಿಯಲ್ಲಿದೆ. ನಂದಕಿಶೋರ್ ಈ ಚಿತ್ರದ ನಿರ್ದೇಶಕರು.

'ಆಪರೇಷನ್ ಅಲಮೇಲಮ್ಮ' ಪ್ರಸ್ತುತ ತೆರೆಗೆ ಸಿದ್ಧವಾಗಿರುವ ಸಿನಿಮಾ. ಸುನಿ ನಿರ್ದೇಶನದ ಅಲಮೇಲಮ್ಮ ಈಗ ಚಾಲ್ತಿಯಲ್ಲಿರುವ ಥ್ರಿಲ್ಲರ್‌ಗಳ ಸಾಲಿಗೆ ಸೇರುವ ಸಿನಿಮಾ. ಈ ಚಿತ್ರದಲ್ಲಿನ ಶ್ರದ್ಧಾ ಅವರ ಪಾತ್ರಕ್ಕೆ ಸಾಕಷ್ಟು ಮಹತ್ವವಿದ್ದು, ಆ ಪಾತ್ರ ಚಿತ್ರರಸಿಕರ ಗಮನಸೆಳೆಯಲಿದೆ ಎನ್ನುವುದು ಚಿತ್ರತಂಡದ ಅನಿಸಿಕೆ. ಈ ನಡುವೆ ತಮಿಳಿನಲ್ಲಿ ಕೂಡ ಶ್ರದ್ಧಾಗೆ ಅವಕಾಶಗಳ ಬಾಗಿಲು ತೆರೆಯುತ್ತಿದೆ. ಕನ್ನಡದ ಹುಡುಗಿಯೊಬ್ಬಳು ತನ್ನ ಚೆಲುವು ಹಾಗೂ ಪ್ರತಿಭೆಯಿಂದ ಅರ್ಥಪೂರ್ಣ ಅವಕಾಶಗಳನ್ನೂ ಸಹೃದಯರ ಮೆಚ್ಚುಗೆಯನ್ನೂ ಪಡೆಯುತ್ತಿರುವುದು ವಿಶೇಷ.

## ಮತ್ತೆ ಕೋಟಿ ಜಪ!

ಪ್ರೇಮ್ ನಿರ್ದೇಶನದ 'ದಿ ವಿಲನ್' ಚಿತ್ರದ ಶೂಟಿಂಗ್ ನಡೆಯುತ್ತಿರುವಾಗಲೇ ಸುದೀಪ್ ನಟಿಸಲಿರುವ ಹೊಸ ಚಿತ್ರದ ಸುದ್ದಿ ಹೊರಬಿದ್ದಿದೆ. ಅದು 'ಕೋಟಿಗೊಬ್ಬ 3' ಚಿತ್ರಕ್ಕೆ ಸಂಬಂಧಿಸಿದ ಸುದ್ದಿ.

ತಮಿಳಿನ ಸ್ಟಾರ್ ನಿರ್ದೇಶಕ ರವಿಕುಮಾರ್ ನಿರ್ದೇಶನದಲ್ಲಿ ರೂಪುಗೊಂಡಿದ್ದ 'ಕೋಟಿಗೊಬ್ಬ 2' ಸುದೀಪ್ ಅಭಿಮಾನಿಗಳನ್ನು ರಂಜಿಸಿತ್ತು. ಶೀರ್ಷಿಕೆಯ ಭಾವನಾತ್ಮಕ ಎಳೆಯನ್ನು ನೆಚ್ಚಿಕೊಂಡಿರುವ ನಿರ್ಮಾಪಕ ಸೂರಪ್ಪ ಬಾಬು ಇದೀಗ 'ಕೋಟಿಗೊಬ್ಬ 3' ನಿರ್ಮಿಸುವ ಉತ್ಸಾಹದಲ್ಲಿದ್ದಾರೆ. ಈ ಚಿತ್ರದಲ್ಲಿನ ನಟನೆಗಾಗಿ ಅವರು ಸುದೀಪ್‌ಗೆ ಭಾರೀ ಮೊತ್ತದ ಸಂಭಾವನೆಯನ್ನು ನೀಡುತ್ತಿದ್ದಾರಂತೆ. 'ಇದು ಸುದೀಪ್ ಅಭಿಮಾನಿಗಳಿಗಾಗಿ ನಿರ್ಮಿಸುತ್ತಿರುವ ಸಿನಿಮಾ' ಎಂದು ಸೂರಪ್ಪ ಬಾಬು ಹೇಳಿಕೊಂಡಿದ್ದಾರೆ.

ಈಗಾಗಲೇ ಚಿತ್ರಕಥೆ ಸಿದ್ಧತೆಯ ಕೆಲಸಗಳು ಆರಂಭವಾಗಿವೆ. ಈ ಚಿತ್ರದ ನಿರ್ದೇಶನದ ಹೊಣೆ ರವಿಕುಮಾರ್ ಅವರ ಹೆಗಲಿಗೆ ಬೀಳುತ್ತದಾ ಅಥವಾ ಕನ್ನಡದ ನಿರ್ದೇಶಕರಿಗೆ ಅವಕಾಶ ದೊರೆಯುತ್ತದಾ ಎನ್ನುವುದು ಇನ್ನೂ ಸ್ಪಷ್ಟವಾಗಿಲ್ಲ.

ಸೂರಪ್ಪಬಾಬು ಅವರ ಸಿನಿಮಾ ಸೆಟ್ಟೇರುವುದು ಈ ವರ್ಷದ ಕೊನೆಯಲ್ಲಿ. ಅದೇ ಹೊತ್ತಿಗೆ, 'ಹೆಬ್ಬುಲಿ' ಯಶಸ್ಸಿನ ಗುಂಗಿನಲ್ಲಿರುವ  ಕೃಷ್ಣ ನಿರ್ದೇಶಿಸಲಿರುವ ಚಿತ್ರವೂ ಸೆಟ್ಟೇರಲಿದೆ. ಒಮ್ಮೆಗೇ ಎರಡು ಸಿನಿಮಾಗಳಲ್ಲಿ ಸುದೀಪ್ ತೊಡಗಿಸಿಕೊಳ್ಳಲಿದ್ದಾರೆ. ಆದರೆ, ಇವೆರಡರಲ್ಲಿ ಮೊದಲು ತೆರೆ ಕಾಣುವುದು ಕೃಷ್ಣ ನಿರ್ದೇಶಿಸಲಿರುವ ಸಿನಿಮಾ ಎಂದು ಸುದೀಪ್ ಸ್ಪಷ್ಟಪಡಿಸಿದ್ದಾರೆ.

■ ರಘು